# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 317 |
| ಸದಸ್ಯರ ಹೆಸರು | : | ಶ್ರೀ ಭೀಮರಾವ್ ಬಸವರಾಜ್ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13–08–2025 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬೀದರ ಜಿಲ್ಲೆ ಹುಮನಾಬಾದ ಕ್ಷೇತ್ರದ ಮತ್ತು ಬೀದರ ದಕ್ಷಿಣ ಕ್ಷೇತ್ರದ ಮಧ್ಯೆ ಬರುವ ಹಿಲಾಲಪುರ ಮತ್ತು ರಂಜೋಳ ಗ್ರಾಮದ ಮಧ್ಯ ಕಲ್ಪಿಸುವ ಸೇತುವೆ ಸುಮಾರು 25 ವರ್ಷಗಳ ಹಳೆಯದಾಗಿದ್ದು, ಇತ್ತೀಚೆಗೆ ಪಿಲ್ಲರ ಮತ್ತು ಸೇತುವೆಯಲ್ಲಿ ಬಿರುಕು ಬಿಟ್ಟಿರುವುದರಿಂದ ದಿನನಿತ್ಯ ಸಾವಿರಾರು ವಾಹನ ಓಡಾಡುತ್ತಿದ್ದು ಹಾಗೂ ಜನರು ಜೀವ ಭಯದಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯಾ; | ಬೀದರ ಜಿಲ್ಲೆ ಹುಮನಾಬಾದ ಮತಕ್ಷೇತ್ರ ಮತ್ತು ಬೀದರ ದಕ್ಷಿಣ ಮತಕ್ಷೇತ್ರ ಮಧ್ಯದ ಹೊನ್ನಳಿ–ಉಡಬಾಳ ರಾಜ್ಯ ಹೆದ್ದಾರಿ–198, ಖೇಣಿರಂಜೋಳ ಗ್ರಾಮದ ಹತ್ತಿರ (ಹಿಲಾಲಪೂರ ಮತ್ತು ರಂಜೋಳ್ ಗ್ರಾಮದ ಮಧ್ಯದ) ಕಿ.ಮೀ.17.2 ರಲ್ಲಿ ಸೇತುವೆ ಇದ್ದು, ಇದು 35 ವರ್ಷಗಳ ಹಳೆಯದಾಗಿದ್ದು, ಸದರಿ ಸೇತುವೆಯ ಒಟ್ಟು ಉದ್ದ 175 ಮೀಟರ್ ಮತ್ತು ಅಗಲ 8.4 ಮೀಟರ್ ಇರುತ್ತದೆ.<br><br>ಸದರಿ ಸೇತುವೆಯ Expansion Joint ಪ್ಲೇಟ್ ಕೆಳಗಡೆ ಇರುವ ಕಾಂಕ್ರೀಟ್ ಹಾನಿಯಾಗಿರುತ್ತದೆ. ದಿನನಿತ್ಯದ ರಸ್ತೆ ಸಂಚಾರಕ್ಕೆ ಅಡಚಣೆ ಹಾಗೂ ಯಾವುದೇ ಅನಾಹುತ ಆಗದಂತೆ ತಡೆಯಲು ಸದರಿ Expansion Joint ಪ್ಲೇಟ್ ಕೆಳಗಡೆ ಇರುವ ಕಾಂಕ್ರೀಟ್ ಅನ್ನು ದುರಸ್ತಿ ಮಾಡಿ ಸುಗಮ ಸಂಚಾರಕ್ಕೆ ಯೋಗ್ಯ ಮಾಡಲಾಗಿದೆ. ಸದರಿ ಸೇತುವೆಯಲ್ಲಿ Expansion Joint ದುರಸ್ತಿ ಹೊರತುಪಡಿಸಿ, ಪಿಲ್ಲರ್ ಮತ್ತು ಸೇತುವೆಯಲ್ಲಿ ಯಾವುದೇ ಬಿರುಕುಗಳು ಇರುವುದಿಲ್ಲ. |
| ಆ) | ಬಂದಿದ್ದಲ್ಲಿ, ಸರ್ಕಾರವು ಸೇತುವೆ ಕಾಮಗಾರಿಗಾಗಿ ಕೈಗೊಂಡ ಕ್ರಮವೇನು; | |
| ಇ) | ಮಳೆಗಾಲ ಪ್ರಾರಂಭವಾಗಿರುವುದರಿಂದ ಸೇತುವೆ ಮತ್ತಷ್ಟು ಶಿಥಿಲಗೊಳ್ಳುವುದರಿಂದ ಸರ್ಕಾರ ತುರ್ತಾಗಿ ಕೈಗೊಳ್ಳುವ ಕ್ರಮವೇನು? (ಮಾಹಿತಿ ನೀಡುವುದು) | |

ಸಂಖ್ಯೆ: ಲೋಇ 96 ಸಿಐಎಸ್ 2025 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು